# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1091
ಉತ್ತರಿಸಬೇಕಾದ ದಿನಾಂಕ : 13.03.2020
ಸದಸ್ಯರ ಹೆಸರು : ಶ್ರೀ.ಕೆ.ಎ.ತಿಪ್ಪೇಸ್ವಾಮಿ,
ಉತ್ತರಿಸುವ ಸಚಿವರು : ಮಾನ್ಯ ಪ್ರವಾಸೋದ್ಯಮ ಮತ್ತು ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು

| ಕ್ರ ಸ | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ ಕೆಂದ್ರ ಮತ್ತು ರಾಜ್ಯ ಸರ್ಕಾರಗಳ ಯೋಜನೆಯಡಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ಕಳೆದ 03 ವರ್ಷಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿರುವ ಯೋಜನೆಗಳು ಯಾವುವು; (ಸಂಪೂರ್ಣ ಮಾಹಿತಿ ನೀಡುವುದು) | ರಾಜ್ಯದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಯೋಜನೆಗಳಡಿಯಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ವತಿಯಿಂದ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳು ಈ ಕೆಳಗಿನಂತಿವೆ.<br><br>* ಕೇಂದ್ರ ಸರ್ಕಾರವು ಹೊರತಂದಿರುವ ಖೇಲೋ ಇಂಡಿಯಾ ಯೋಜನೆಯಡಿಯಲ್ಲಿ ಕ್ರೀಡಾಕೂಟಗಳ ಸಂಘಟನೆ, ನಗರ ಪ್ರದೇಶಗಳಲ್ಲಿ ಕ್ರೀಡಾ ಮೂಲಭೂತ ಸೌಕರ್ಯಗಳ ನಿರ್ಮಾಣ ಹಾಗೂ ಕ್ರೀಡಾ ಪ್ರತಿಭೆಗಳನ್ನು ಗುರುತಿಸಿ ಪ್ರೋತ್ಸಾಹ ನೀಡಲಾಗುತ್ತಿದೆ. "ಖೇಲೋ ಇಂಡಿಯಾ" ಯೋಜನೆಯನ್ನು ಅನುಷ್ಠಾನಗೊಳಿಸಲು ಕೇಂದ್ರ ಸರ್ಕಾರವು ಶೇ.100% ರಷ್ಟು ಅನುದಾನವನ್ನು ನೀಡಲಾಗುತ್ತಿದೆ.<br><br>ಕಳೆದ ಮೂರು ವರ್ಷಗಳಲ್ಲಿ ಖೇಲೋ ಇಂಡಿಯಾ ಯೋಜನೆಯಡಿ ಈ ಕೆಳಕಂಡ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ.<br><br>1) ಧಾರವಾಡ-ಹುಬ್ಬಳ್ಳಿಯಲ್ಲಿ ವಿವಿದ್ದೋದ್ಧೇಶ ಒಳಾಂಗಣ ಕ್ರೀಡಾಂಗಣ ನಿರ್ಮಾಣ<br>2)ಹಾಸನ ಜಿಲ್ಲಾ ಕ್ರೀಡಾಂಗಣದಲ್ಲಿ ಸಿಂಥೆಟಿಕ್ ಅಥ್ಲೆಟಿಕ್ಸ್ ಟ್ರ್ಯಾಕ್ ನಿರ್ಮಾಣ.<br>3)ಉತ್ತರ ಕನ್ನಡ ಜಿಲ್ಲೆಯ ಹಳಿಯಾಳದಲ್ಲಿ ವಿವಿದ್ದೋದ್ಧೇಶ ಒಳಾಂಗಣ ಕ್ರೀಡಾಂಗಣ ನಿರ್ಮಾಣ.<br>4) ಶಿವಮೊಗ್ಗ ಜಿಲ್ಲೆಯ ಶಿರಾಳಕೊಪ್ಪದಲ್ಲಿ ವಿವಿದ್ದೋದ್ಧೇಶ ಒಳಾಂಗಣ ಹಾಲ್ ನಿರ್ಮಾಣ. |

* ರಾಜ್ಯದಲ್ಲಿ ಒಟ್ಟು 34 ಕ್ರೀಡಾಶಾಲೆ/ನಿಲಯಗಳಿದ್ದು, ಇವುಗಳಿಗೆ ಪ್ರವೇಶ ನೀಡುವ ಸಂಬಂಧ ತಾಲ್ಲೂಕು, ಜಿಲ್ಲಾ, ವಿಭಾಗ ಮತ್ತು ರಾಜ್ಯಮಟ್ಟದಲ್ಲಿ ಆಯ್ಕೆ ಶಿಬಿರಗಳನ್ನು ನಡೆಸಿ ಕ್ರೀಡಾಪಟುಗಳ ದೈಹಿಕ ಕ್ಷಮತೆಯನ್ನು ಪರೀಕ್ಷಿಸಿ ಅರ್ಹ ಕ್ರೀಡಾ ಪಟುಗಳಿಗೆ ಕ್ರೀಡಾಶಾಲೆ/ನಿಲಯಗಳಿಗೆ ಪ್ರವೇಶ ನೀಡಲಾಗುತ್ತಿದೆ.

* ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದ ಅಧಿಕೃತ ಕ್ರೀಡಾಕೂಟಗಳಲ್ಲಿ ಕರ್ನಾಟಕವನ್ನು ಪ್ರತಿನಿಧಿಸಿ ಭಾಗವಹಿಸಿ ವಿಜೇತರಾದ ಕ್ರೀಡಾಪಟುಗಳಿಗೆ ನಗದು ಪುರಸ್ಕಾರ, ಶೈಕ್ಷಣಿಕ ಶುಲ್ಕ ಮರುಪಾವತಿ ಹಾಗೂ ಕ್ರೀಡಾ ವಿದ್ಯಾರ್ಥಿ ವೇತನವನ್ನು ನೀಡಲಾಗುತ್ತಿದೆ.

* ಕರ್ನಾಟಕ ಸ್ಪೋರ್ಟ್ಸ್ ಆಕಾಡೆಮಿ ಫಾರ್ ಎಕ್ಸಲೆನ್ಸ್ ಯೋಜನೆಯಡಿಯಲ್ಲಿ ಪ್ರತಿಭಾನ್ವಿತ ಕ್ರೀಡಾಪಟುಗಳಿಗೆ ಉನ್ನತ ಕ್ರೀಡಾ ತರಬೇತಿಗಾಗಿ ಸಹಾಯಧನ ನೀಡಲಾಗುತ್ತಿದೆ.

* ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ರಾಜ್ಯವನ್ನು ಪ್ರತಿನಿಧಿಸಿ ಸಾಧನೆ ಮಾಡಲಾದ ಕ್ರೀಡಾಪಟುಗಳಿಗೆ ಸಿ.ಇ.ಟಿ ಮೂಲಕ ವೃತ್ತಿಪರ ಕೋರ್ಸ್ ಗಳಲ್ಲಿ ಪ್ರವೇಶಕ್ಕೆ ಮೀಸಲಾತಿ ನೀಡಲಾಗುವುದು.

* ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ರಾಜ್ಯವನ್ನು ಪ್ರತಿನಿಧಿಸಿ ಸಾಧನೆ ಮಾಡಿದ ಕ್ರೀಡಾಪಟುಗಳಿಗೆ ಏಕಲವ್ಯ ಪ್ರಶಸ್ತಿ ಮತ್ತು ನಗದು ಪುರಸ್ಕಾರವನ್ನು ನೀಡಲಾಗುವುದು.

* ದೇಸೀ ಗ್ರಾಮೀಣ ಕ್ರೀಡೆಗಳಲ್ಲಿ ವಿಶೇಷ ಸಾಧನೆ ಮಾಡಿದ ರಾಜ್ಯದ ಗ್ರಾಮೀಣ ಕ್ರೀಡಾ ಪ್ರತಿಭೆಗಳಿಗೆ ಕರ್ನಾಟಕ ಕ್ರೀಡಾ ರತ್ನ ಪ್ರಶಸ್ತಿ ಹಾಗೂ ನಗದನ್ನು ನೀಡಿ ಗೌರವಿಸಲಾಗುವುದು.

* ಕೇಂದ್ರ ಸರ್ಕಾರ ಪುರಸ್ಕೃತ ಅರ್ಜುನ, ಧ್ಯಾನಚಂದ, ದ್ರೋಣಾಚಾರ್ಯ ಹಾಗೂ ರಾಜೀವ್ ಗಾಂಧಿ ಖೇಲ್ ರತ್ನ ಪ್ರಶಸ್ತಿಗಳಿಗೆ ಇಲಾಖೆಯಿಂದ ಶಿಫಾರಸ್ಸು ಮಾಡಲಾಗುವುದು. ಸದರಿ ಪ್ರಶಸ್ತಿ ಪುರಸ್ಕೃತರಾದ ರಾಜ್ಯದ ಕ್ರೀಡಾಪಟುಗಳಿಗೆ ಉಚಿತ ಬಸ್ ಪಾಸ್ ಸೌಲಭ್ಯವನ್ನು ನೀಡಲಾಗುತ್ತಿದೆ.

* ಖೇಲೋ ಇಂಡಿಯಾ ಯೋಜನೆ: ಕೇಂದ್ರ ಸರ್ಕಾರವು ಹೊರತಂದಿರುವ ಖೇಲೋ ಇಂಡಿಯಾ ಯೋಜನೆಯಡಿಯಲ್ಲಿ ಕ್ರೀಡಾಕೂಟಗಳ ಸಂಘಟನೆ, ನಗರ ಪ್ರದೇಶಗಳಲ್ಲಿ ಕ್ರೀಡಾ ಮೂಲಭೂತ ಸೌಕರ್ಯಗಳ ನಿರ್ಮಾಣ ಹಾಗೂ ಕ್ರೀಡಾ ಪ್ರತಿಭೆಗಳನ್ನು ಗುರುತಿಸಿ ಪ್ರೋತ್ಸಾಹ ನೀಡಲಾಗುತ್ತಿದೆ. "ಖೇಲೋ ಇಂಡಿಯಾ" ಯೋಜನೆಯನ್ನು ಅನುಷ್ಠಾನಗೊಳಿಸಲು ಕೇಂದ್ರ ಸರ್ಕಾರವು ಶೇ.100ರಷ್ಟು ಅನುದಾನವನ್ನು ನೀಡುತ್ತಿದೆ.

* ರಾಜ್ಯ ಮಟ್ಟದ, ರಾಷ್ಟ್ರ ಮಟ್ಟದ ಹಾಗೂ ಅಂತಾರಾಷ್ಟ್ರ ಮಟ್ಟದ ಕ್ರೀಡಾ ಸ್ಪರ್ಧೆಗಳಲ್ಲಿ ವಿಶೇಷ ಸಾಧನೆಗೈದು, 50 ವರ್ಷಕ್ಕಿಂತ ಹೆಚ್ಚು ವಯೋಮಾನದ ಪ್ರಸ್ತುತ ಸಂಕಷ್ಟ ಪರಿಸ್ಥಿತಿಯಲ್ಲಿರುವ ಮಾಜಿ ಕ್ರೀಡಾಪಟುಗಳಿಗೆ ಇಲಾಖೆಯಿಂದ ಮಾಸಾಶನವನ್ನು ನೀಡಲಾಗುತ್ತಿದೆ.

* ಯುವ ಕ್ರೀಡಾ ಮಿತ್ರ : ಗ್ರಾಮೀಣ ಭಾಗಗಳಲ್ಲಿ ಕ್ರೀಡಾ ಸಂಸ್ಕೃತಿಯನ್ನು ಬೆಳೆಸಲು ಕ್ರೀಡಾ ಸಂಘಗಳಿಗೆ ಕ್ರೀಡಾ ಸಲಕರಣೆ ನೀಡುವುದು.

* ಯುವ ಚೈತನ್ಯ : ಗ್ರಾಮದಲ್ಲಿ ಯುವಜನರನ್ನು ಕ್ರೀಡಾ ಚಟುವಟುಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡಲು ಅಗತ್ಯ ಕ್ರೀಡಾ ಕಿಟ್ ನೀಡುವುದು.

* ಯುವ ಶಕ್ತಿ ಸಂಘ : ಯುವಜನರು ಗ್ರಾಮ ಮಟ್ಟದಲ್ಲಿ ಆದಾಯೋತ್ಪನ್ನ ಚಟುವಟಿಕೆಗಳಲ್ಲಿ ತೊಡಗಿಸುವಂತೆ ಪ್ರೋತ್ಸಾಹಿಸಲು ಆವರ್ತನಿಧಿ ನೀಡುವುದು.

| | | |
|---|---|---|
| | | * ಗ್ರಾಮೀಣ ಕ್ರೀಡೋತ್ಸವ : ಗ್ರಾಮೀಣ ಪ್ರದೇಶದಲ್ಲಿ ದೇಸಿ ಕ್ರೀಡೆಗಳನ್ನು ಸ್ಥಳೀಯ ಮಟ್ಟದಲ್ಲಿ ಪ್ರೋತ್ಸಾಹಿಸುವುದು.<br><br>* ಯುವ ಶಕ್ತಿ ಕೇಂದ್ರ : ಯುವಜನರು ದೈಹಿಕ ಸಾಮರ್ಥ್ಯವನ್ನು ಹೆಚ್ಚಿಸಲು ಅಗತ್ಯ ಜಿಮ್ ಸಾಮಗ್ರಿಗಳ ಪೂರೈಕೆ ಮಾಡುವುದು.<br><br>* ಯುವ ಸ್ಪಂದನ : ಯುವಜನರ ಮಾನಸಿಕ ಆರೋಗ್ಯವನ್ನು ಸದೃಢಗೊಳಿಸಲು ಯುವಸ್ಪಂದನ ಯೋಜನೆ.<br><br>ವಿಶೇಷ ಘಟಕ ಮತ್ತು ಗಿರಿಜನ ಉಪಯೋಜನೆ :<br>• ಅಂತರರಾಷ್ಟ್ರೀಯ, ರಾಷ್ಟ್ರೀಯ ಮತ್ತು ರಾಜ್ಯ ಮಟ್ಟದ ಅಧಿಕೃತ ಕ್ರೀಡಾಕೂಟಗಳಲ್ಲಿ ಪದಕ ವಿಜೇತರಾದ ಪರಿಶಿಷ್ಟ ಜಾತಿ ಮತ್ತು ಪಂಗಡದ ಕ್ರೀಡಾಪಟುಗಳಿಗೆ ಪ್ರೋತ್ಸಾಹಧನ ನೀಡುವ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದೆ.<br>• ಸಂಘ-ಸಂಸ್ಥೆಗಳಿಗೆ ಜಿಮ್ ಸ್ಥಾಪನೆಗೆ ರೂ. 2.00 ಲಕ್ಷಗಳ ಸಹಾಯಧನ ನೀಡುವುದು.<br>ಯುವಜನರಿಗೆ ಪ್ರೈವೇಟ್ ಪೈಲಟ್ ಲೈಸೆನ್ಸ್ ಮತ್ತು ಕಮರ್ಷಿಯಲ್ ಪೈಲಟ್ ಲೈಸೆನ್ಸ್ ತರಬೇತಿ ನೀಡುವುದು. |
| ಆ | ರಾಜ್ಯದಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ಅನುದಾನದಲ್ಲಿ ವಿವಿಧ ಯೋಜನೆಗಳಡಿಯಲ್ಲಿ ಕಳೆದ 03 ವರ್ಷಗಳಲ್ಲಿ ಇಲ್ಲಿಯವರೆಗೆ ಒದಗಿಸಿರುವ ಅನುದಾನವೆಷ್ಟು;(ವಿಧಾನ ಸಭಾ ಕ್ಷೇತ್ರವಾರು ಸಂಪೂರ್ಣ ಮಾಹಿತಿ ಒದಗಿಸುವುದು) | ಕಳೆದ 03 ವರ್ಷಗಳಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಗೆ ವಿವಿಧ ಯೋಜನೆಗಳಡಿಯಲ್ಲಿ ಒದಗಿಸಿರುವ ಅನುದಾನದ ವಿವರವನ್ನು **ಅನುಬಂಧ-1 ರಲ್ಲಿ** ಲಗತ್ತಿಸಿದೆ. ವಿಧಾನಸಭಾ ಕ್ಷೇತ್ರವಾರು ಅನುದಾನ ಹಂಚಿಕೆಯಾಗಿರುವುದಿಲ್ಲ. |

| | | |
|---|---|---|
| ಇ | ರಾಜ್ಯದಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ವಿವಿಧ ಯೋಜನೆಗಳಡಿಯಲ್ಲಿ ಕಳೆದ 03 ವರ್ಷಗಳಲ್ಲಿ ನೀಡಿರುವ ಸಹಾಯಧನವನ್ನು ಯಾವ ಯಾವ ಯೋಜನೆ ಅಡಿಯಲ್ಲಿ ಎಷ್ಟು ಜನರಿಗೆ ಹಾಗೂ ಎಷ್ಟು ಕ್ರೀಡಾ ಸಂಘಗಳಿಗೆ ಸಹಾಯಧನ ನೀಡಿದೆ (ವಿಧಾನಸಭಾ ಕ್ಷೇತ್ರವಾರು ಸಂಪೂರ್ಣ ಮಾಹಿತಿ ಒದಗಿಸುವುದು) | ರಾಜ್ಯದಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ವಿವಿಧ ಯೋಜನೆಗಳಡಿಯಲ್ಲಿ ಕಳೆದ 03 ವರ್ಷಗಳಲ್ಲಿ ನೀಡಿರುವ ಸಹಾಯಧನದ ವಿವರವನ್ನು **ಅನುಬಂಧ-2 ರಲ್ಲಿ** ಲಗತ್ತಿಸಿದೆ. ವಿಧಾನ ಸಭಾ ಕ್ಷೇತ್ರವಾರು ಅನುದಾ ಹಂಚಿಕೆ ಮಾಡಿರುವುದಿಲ್ಲ. |

**ವೈಎಸ್ ಡಿ-/ಇಬಿಬಿ/36/2020**

(ಸಿ. ಟಿ. ರವಿ)
ಪ್ರವಾಸೋದ್ಯಮ ಮತ್ತು ಕನ್ನಡ ಮತ್ತು ಸಂಸ್ಕೃತಿ
ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು.

# ಪ್ರಶ್ನೆ ಸಂಖ್ಯೆ:1091ರ ಅನುಬಂಧ - 1
## ಕಳೆದ 3 ವರ್ಷಗಳಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಗೆ ಒದಗಿಸಿರುವ ಅನುದಾನದ ವಿವರ

(ರೂ.ಲಕ್ಷಗಳಲ್ಲಿ)

| ಕ್ರ. ಸಂ | ಯೋಜನೆಯ ಹೆಸರು | 2016-17ನೇ ಸಾಲಿಗೆ ಪರಿಷ್ಕೃತ ಬಿಡುಗಡೆ | 2017-18ನೇ ಸಾಲಿಗೆ ಒದಗಿಸಿರುವ ಅನುದಾನ | 2018-19ನೇ ಸಾಲಿಗೆ ಒದಗಿಸಿರುವ ಅನುದಾನ |
|---|---|---|---|---|
| 1 | 2204-00-102-2-03 State Level Youth Festival ರಾಜ್ಯ ಮಟ್ಟದ ಯುವಜನೋತ್ಸವ ಚಿ) 059 ಇತರೆ ವೆಚ್ಚ | 50.00 | 50.00 | 50.00 |
| | ಛ) 117 ಕ್ರೀಡಾಪಟುಗಳಿಗೆ ವಿದ್ಯಾರ್ಥಿ ವೇತನ Incentive Scholarship | 100.00 | 125.00 | 80.00 |
| | ಛಿ) 117 ರಾಷ್ಟ್ರ ಮತ್ತು ಅಂತರ ರಾಷ್ಟ್ರೀಯ ಮಟ್ಟದಲ್ಲಿ ಉತ್ತಮ ಸಾಧನೆ ಮಾಡುವ ಎಲ್ಲಾ ಕ್ರೀಡಾಪಟುಗಳು ಶೈಕ್ಷಣಿಕ ಶುಲ್ಕ ಮರುಪಾವತಿ | 70.00 | 175.00 | 120.00 |
| | 102-2-03 | **220.00** | **350.00** | **250.00** |
| 2 | 2204-00-103-0-02 State Youth Centre ರಾಜ್ಯ ಯುವ ಕೇಂದ್ರ 059 | 80.00 | 161.00 | 111.00 |
| 3 | 2204-00-103-0-18 059 In house Activities at State Youth Centre- ರಾಜ್ಯ ಯುವ ಕೇಂದ್ರದಲ್ಲಿ ಒಳಾಂಗಣ ಚಟುವಟಿಕೆ | 20.00 | 100.00 | 45.00 |
| | ಛ) 059 ಇತರೆ ವೆಚ್ಚ, ಜಿಲ್ಲಾ ಯುವ ಪ್ರಶಸ್ತಿ ಮತ್ತು ಯುವಜನ ಸಮ್ಮೇಳನ ಕಾರ್ಯಾಗಾರ ಮತ್ತು ಯುವ ತರಬೇತಿ ಶಿಬಿರ | 70.00 | 70.00 | 55.00 |
| | ಒಟ್ಟು 103-0-18 | **90.00** | **170.00** | **100.00** |
| 4 | 2204-00-103-0-27 a) 059 ಯುವ ನೀತಿ ಅನುಷ್ಠಾನ<br>059 ನಮ್ಮೂರ ಶಾಲೆಗೆ ನಮ್ಮೂರ ಯುವಜನರು<br>ಛಿ) ಯುವ ಶಕ್ತಿ ಕೇಂದ್ರ (ಹೊಸ ಯೋಜನೆ)<br>ಒದಗಿಸಿರುವ ಅನುದಾನ ರೂ.826.00<br>ಮರು ಹೊಂದಾಣಿಕ ರೂ.175.00<br>ರೂ.651.00 | 700.00 | 3200.00<br>-270.00<br>**2930.00** | 1600.00 |
| | 103-0-27 ಒಟ್ಟು | **700.00** | **2930.00** | **1600.00** |
| 5 | 2204-00-103-0-28 051 ಸಾಮಾನ್ಯ ವೆಚ್ಚ, ರಾಜೀವ್ ಗಾಂಧಿ ಖೇಲ್ ಅಭಿಯಾನ್ | 10.00 | 10.00 | 10.00 |
| 6 | 2204-00-104-0-02 Promotion of Sports Activities ಕ್ರೀಡಾ ಚಟುವಟಿಕೆಗಳಿಗೆ ಪ್ರೋತ್ಸಾಹ, ಚಿ) 015 ಪೂರಕ ವೆಚ್ಚಗಳು, ನಗದು ಪ್ರಶಸ್ತಿ | 225.00 | 930.10 | 400.00 |
| | ಛ) 059 ಇತರೆ ಖರ್ಚು Legislature Sports ಶಾಸಕರ ಕ್ರೀಡಾಕೂಟ | -- | 50.00 | -- |
| | ಛಿ) 059 ಇತರೆ ಖರ್ಚು Karnataka Sports Academy for Excellence. | 900.00 | 1550.00 | 1200.00 |
| | 100 ಧನ ಸಹಾಯ/ಪರಿಹಾರ (ರಾಜ್ಯ ಸರ್ಕಾರಿ ನೌಕರರ ಕ್ರೀಡಾಕೂಟ) | -- | -- | 50.00 |
| | ಒಟ್ಟು 104-0-02 015 - 059 | **1100.00** | **2530.10** | **1650.00** |
| 7 | 2204-00-104-0-25 ಕ್ರೀಡಾ ಸಂಸ್ಥೆಗಳು ಮತ್ತು ನಿಲಯ 002 ವೇತನ 003 ವೇತನ ಸಿಬ್ಬಂದಿ | 31.00 | 107.00 | 73.00 |
| | 051 ಸಾಮಾನ್ಯ ವೆಚ್ಚಗಳು Institution & Hostel Maintenance ಕ್ರೀಡಾ ಶಾಲೆ ಮತ್ತು ನಿಲಯಗಳ ನಿರ್ವಹಣೆ | 1550.00 | 3400.00 | 2000.00 |

| | | | | |
|---|---|---|---|---|
| | ಛ) 059 ಇತರೆ ಖರ್ಚು Devp. Of Vidhyanagar Campus ವಿದ್ಯಾನಗರ ಆವರಣ ಅಭಿವೃದ್ಧಿ | 80.00 | 119.00 | 828.00 |
| | ಒಟ್ಟು 104-0-25 051 059 101 | **1661.00** | **3626.00** | **2901.00** |

| ಕ್ರ. ಸಂ | ಯೋಜನೆಯ ಹೆಸರು | 2016-17ನೇ ಸಾಲಿಗೆ ಪರಿಷ್ಕೃತ ಬಿಡುಗಡೆ | 2017-18ನೇ ಸಾಲಿಗೆ ಒದಗಿಸಿರುವ ಅನುದಾನ | 2018-19ನೇ ಸಾಲಿಗೆ ಒದಗಿಸಿರುವ ಅನುದಾನ |
|---|---|---|---|---|
| 8 | 2204-00-104-0-29 ಕರ್ನಾಟಕ ಕ್ರೀಡಾ ಪ್ರಾಧಿಕಾರ a) 059 ಇತರೆ ಖರ್ಚು | -- | 1900.00 | 1103.00 |
| | b) 059 . Development of Youth Training Campus –ಕುಂಬಳಗೂಡು ತರಬೇತಿ ಕೇಂದ್ರದ ಅಭಿವೃದ್ಧಿ | 80.00 +240.00 **320.00** | 35.00 | 20.00 |
| | General Thimmaiah National Academy of Adventure ಜನರಲ್ ತಿಮ್ಮಯ್ಯ ರಾಷ್ಟೀಯ ಸಾಹಸ ಅಕಾಡೆಮಿ | 333.00 | 175.00 | 287.00 |
| | ಛ) 101 ಕರ್ನಾಟಕ ಕ್ರೀಡಾ ಪ್ರಾಧಿಕಾರ S.A.K | 262.00 | -- | -- |
| | ಜ) 103 ಕರ್ನಾಟಕ ಕ್ರೀಡಾ ಪ್ರಾಧಿಕಾರ S.A.K | -- | 502.00 | 527.00 |
| | 115 ಸಹಾಯಾನುದಾನ ಗುತ್ತಿಗೆ/ಹೊರಗುತ್ತಿಗೆ | -- | -- | -- |
| | ಪೂರಕ ವೆಚ್ಚ-3 | -- | 132.00 | -- |
| | ಪೂರಕ ವೆಚ್ಚ-3 | -- | 173.50 | -- |
| | ಯುವ ನೀತಿ ಅಡಿಯಿಂದ ಮರು ಹೊಂದಾಣಿಕೆ | -- | 270.00 | -- |
| | ಒಟ್ಟು 104-0-29 | **1415.00** | **3187.50** | **1937.00** |
| 9 | 2204-00-104-0-33 059 ಯುವ ಕ್ರೀಡಾ ಸಂಜೀವಿನಿ | 25.00 | 25.00 | 10.00 |
| 10 | 2204-00-104-0-32 059 ಇತರೆ ವೆಚ್ಚ, ಚಿ) ಗ್ರಾಮೀಣ ಕ್ರೀಡೆ ಮತ್ತು ಪಂದ್ಯಗಳು Rural Sports & Games. ಗ್ರಾಮೀಣ ಕ್ರೀಡೋತ್ಸವ, ಛ) ಯುವ ಕ್ರೀಡಾ ಮಿತ್ರ | 820.00 | 1630.00 | 851.55 |
| | 059 ಗ್ರಾಮೀಣ ಗರಡಿ ಮನೆ | 250.00 | 250.00 | |
| | ಹೊಸ ಗರಡಿ ಮನೆ | 30.00 | 10.00 | 352.45 |
| | 104-0-32 ಒಟ್ಟು | **1100.00** | **1890.00** | **1204.00** |
| 13 | 2204-00-796-0-01 423Tribal Area Sub Plan ಖಿಖಿಕ ಗಿರಿಜನ ಉಪಯೋಜನೆ | 587.00 | 966.00 | 734.00 |
| 14 | 2204-00-789-0-01 422 Special Component Plan SCP ವಿಶೇಷ ಘಟಕ ಯೋಜನೆ | 1449.00 | 2384.00 | 1812.00 |
| 15 | 4202-03-102-0-03 ಬಂಡವಾಳ ವೆಚ್ಚ Capital Exp 386 | 1675.00 | 1869.00 | 1500.00 |
| | 422 ಪರಿಶಿಷ್ಟ ಜಾತಿ ಉಪಯೋಜನೆ | 80.00 | 105.00 | 80.00 |
| | 423 ಗಿರಿಜನ ಉಪಯೋಜನೆ | 20.00 | 26.00 | 20.00 |
| | 4202-03-102-0-01 132 ರಾಜ್ಯ ಮಟ್ಟದ ಕ್ರೀಡಾಂಗಣಗಳ ನಿರ್ಮಾಣ | 350.00 | 500.00 | 2000.00 |
| | 4202-03-800-0-05 ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪ ಯೋಜನೆ ಕಾಯ್ದೆ 2013ರಡಿ ಬಳಕೆಯಾಗದೆ ಇರುವ ಮೊತ್ತ 423 ಗಿರಿಜನ ಉಪಯೋಜನೆ | -- | -- | -- |
| | **ರಾಜ್ಯ ವಲಯ ಒಟ್ಟು ಮೊತ್ತ** | **10826.00** | **22282.60** | **16370.00** |
| | **ಜಿಲ್ಲಾ ವಲಯ** | | | |
| 1 | ಕ್ರೀಡಾಕೂಟ ಮತ್ತು ರ್‍ಯಾಲಿಗಳ ಸಂಘಟನೆ ಮತ್ತು ಅದರಲ್ಲಿಭಾಗವಹಿ ಸಿದವರಿಗೆ ಪ್ರಯಾಣ ಭತ್ಯೆ, ದಿನ ಭತ್ಯೆ 2205-00-104-0-26 090 | 758.25 | 874.79 | 1004.53 |
| 2 | ನಿರ್ದೇಶನ ಮತ್ತು ಆಡಳಿತ ಯುಸೇಕ್ರೀ ಅಧಿಕಾರಿಗಳು, 2205-00-104-0-27 | 347.00 | 396.65 | 371.65 |
| 3 | ಕ್ರೀಡಾಂಗಣಗಳ ಮತ್ತು ಇತರೆಗಳ ನಿರ್ಮಾಣ ಮತ್ತು ನಿರ್ವಹಣೆ 2205-00-104-0-28 140 ಸಣ್ಣಕಾಮಗಾರಿಗಳು | 720.10 | 1400.18 | 1660.81 |

| | | | | |
|---|---|---|---|---|
| 4 | ಕ್ರೀಡಾ ಶಾಲೆ /ವಸತಿ ನಿಲಯಗಳು. 2205-00-104-0-29 090 | 488.48 | 600.54 | 773.41 |
| 5 | ಕಷ್ಟಪರಿಸ್ಥಿತಿಯಲ್ಲಿರುವ ಕ್ರೀಡಾ ಪಟುಗಳು/ ಕುಸ್ತಿ ಗಾರರಿಗೆ ಆರ್ಥಿಕ ನೆರವು. 2205-00-104-0-30 100 | 302.70 | 533.32 | 581.22 |
| 6 | ಗ್ರಾಮೀಣ ಕ್ರೀಡಾ ಕೇಂದ್ರಗಳು. 2205-00-104-0-31 090 | 183.15 | 219.67 | 279.53 |
| 7 | ವಿದ್ಯಾರ್ಥಿಗಳು ಮತ್ತು ವಿದ್ಯಾರ್ಥಿಯೇತರರಿಗೆ ಸಹಾಯ 2205-00-104-0-32 100 ಧನ ಸಹಾಯ | 60.00 | 64.20 | 68.69 |
| 8 | ಕ್ರೀಡಾ ಸಮಾಗ್ರಿಗಳನ್ನು ಕೊಳ್ಳಲು ಮತ್ತು ಆಟದ ಮೈದಾನಗಳನ್ನು ಅಭಿವೃದ್ದಿಗೊಳಿಸಲು ಶೈಕ್ಷಣಿಕ ಮತ್ತು ಇತರೆ ಸಂಸ್ಥೆಗಳಿಗೆ ಸಹಾಯ 2205-00 104-0-33 226 | 59.00 | 63.13 | 67.55 |
| 9 | ಒಳಾಂಗಣ ಕ್ರೀಡಾಂಗಣ ಮತ್ತು ಬಯಲು ರಂಗ ಮಂದಿರ ನಿರ್ಮಾಣಕ್ಕೆ ಅನುದಾನಗಳು. 2205-00-104-0-34 090 | 63.32 | 107.50 | 175.50 |
| 10 | ಗ್ರಾಮಾಂತರ ಪ್ರದೇಶಗಳಲ್ಲಿ ಕ್ರೀಡೆಗಳಿಗೆ ಪ್ರೋತ್ಸಾಹ 2205-00-104-0-35 090 | 30.00 | 32.10 | 34.20 |
| 11 | ಕ್ರೀಡಾ ಸಾಮಾಗ್ರಿಗಳ ಖರೀದಿಗಾಗಿ ಜಿಲ್ಲಾ ಮತ್ತು ವಿಭಾಗೀಯ ಯುವಜನ ಸೇವೆಗಳ ಮಂಡಳಿಗೆ ಸಹಾಯ 2205-00-104-0-36 226 | 30.00 | 32.92 | 35.91 |
| | **ಜಿಲ್ಲಾ ವಲಯ ಒಟ್ಟು** | **3043.00** | **4326.00** | **5053.00** |
| 1 | ಪಂಚಾಯತ್ ಯುವ ಕ್ರೀಡಾ ಹಾಗೂ ಖೇಲ್ ಅಭಿಯಾನ್ (ಕೇಂದ್ರ ಪುರಸ್ಕೃತ ಯೋಜನೆ) 2205-00-104-0-01 051 (ಲಿಂಕ್ ಕೋಡ್ 2204-00-198-6-11 051)ಒಟ್ಟು ಪಾಲು | 600.00 | 600.00 | 600.00 |
| | ಒಟ್ಟು | **14469.00** | **27208.60** | **22023.00** |

# ಪ್ರಶ್ನೆ ಸಂಖ್ಯೆ:1091ರ ಅನುಬಂಧ- 2

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ಈ ಕೆಳಕಂಡ ಯೋಜನೆಗಳನ್ನು ಏಕಗವಾಕ್ಷಿ ಪದ್ಧತಿಯಲ್ಲಿ ರಾಜ್ಯ ಮಟ್ಟದಲ್ಲಿ ಅರ್ಜಿಗಳನ್ನು ಆಹ್ವಾನಿಸಿ ಅರ್ಹ ಫಲಾನುಭವಿಗಳನ್ನು ಗುರುತಿಸಿ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ವಿಧಾನಸಭಾ ಕ್ಷೇತ್ರವಾರು ಅನುದಾನ ಹಂಚಿಕೆ ಮಾಡಿರುವುದಿಲ್ಲ. ಸದರಿ ಯೋಜನೆಗಳಡಿಯಲ್ಲಿ ಕಳೆದ 03 ವರ್ಷಗಳಲ್ಲಿ ಕ್ರೀಡಾಪಟುಗಳಿಗೆ ನೀಡಲಾದ ಧನ ಸಹಾಯದ ಪಟ್ಟಿ

| ಕ್ರ.ಸಂ | ವರ್ಷ | ಕ್ರೀಡಾಪಟುಗಳ ಸಂಖ್ಯೆ | ವೆಚ್ಚವಾದ ಮೊತ್ತ |
|---|---|---|---|
| ವಿದ್ಯಾರ್ಥಿ ವೇತನ | | | |
| 1 | 2016-17 | 962 | 96,20,000.00 |
| 2 | 2017-18 | 495 | 49,50,000.00 |
| 3 | 2018-19 | 906 | 90,60,000.00 |
| ಶೈಕ್ಷಣಿಕ ಶುಲ್ಕ ಮರುಪಾವತಿ | | | |
| 1 | 2016-17 | 290 | 88,85,926.00 |
| 2 | 2017-18 | 264 | 97,17,120.00 |
| 3 | 2018-19 | 352 | 1,09,39,995.00 |
| ನಗದು ಪುರಸ್ಕಾರ | | | |
| 1 | 2016-17 | 53 | 1,37,00,000.00 |
| 2 | 2017-18 | 806 | 9,29,19,000.00 |
| 3 | 2018-19 | 397 | 4,00,00,000.00 |
| ಸ್ಪೋರ್ಟ್ಸ್ ಅಕಾಡೆಮಿ ಫಾರ್ ಎಕ್ಸಲೆನ್ಸಿ | | | |
| 1 | 2016-17 | 58 | 1,47,50,000.00 |
| 2 | 2017-18 | 93 | 2,00,00,000.00 |

- ಅಂತರರಾಷ್ಟ್ರೀಯ, ರಾಷ್ಟ್ರೀಯ ಮತ್ತು ರಾಜ್ಯ ಮಟ್ಟದ ಅಧಿಕೃತ ಕ್ರೀಡಾಕೂಟಗಳಲ್ಲಿ ಪದಕ ವಿಜೇತರಾದ ಪರಿಶಿಷ್ಟ ಜಾತಿ ಮತ್ತು ಪಂಗಡದ ಕ್ರೀಡಾಪಟುಗಳಿಗೆ ಪ್ರೋತ್ಸಾಹಧನ ನೀಡುವ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, ಕಳೆದ 3 ವರ್ಷಗಳ ವಿವರ ಕೆಳಕಂಡಂತಿದೆ.
-

| ವರ್ಷ | ಫಲಾನುಭವಿಗಳ ಸಂಖ್ಯೆ | ಪ್ರೋತ್ಸಾಹಧನದ ಮೊತ್ತ |
|---|---|---|
| 2016-17 | 62 | 375,00,000.00 |
| 2017-18 | 187 | 339,00,000.00 |
| 2018-19 | 242 | 384,00,000.00 |

| ವರ್ಷ | ಸಂಘ-ಸಂಸ್ಥೆಗಳಿಗೆ ಜಿಮ್ ಸ್ಥಾಪನೆಗೆ ರೂ. 2.00 ಲಕ್ಷಗಳ ಸಹಾಯಧನ ನೀಡುವುದು. | | ಯುವಜನರಿಗೆ ಪ್ರೈವೇಟ್ ಪೈಲಟ್ ಲೈಸೆನ್ಸ್ ಮತ್ತು ಕಮರ್ಷಿಯಲ್ ಪೈಲಟ್ ಲೈಸೆನ್ಸ್ ತರಬೇತಿ ನೀಡುವುದು. |
|---|---|---|---|
| | ಸಂಘ-ಸಂಸ್ಥೆಗಳ ಸಂಖ್ಯೆ | ಪ್ರೋತ್ಸಾಹಧನದ ಮೊತ್ತ | ಫಲಾನುಭವಿಗಳ ಸಂಖ್ಯೆ |
| 2016-17 | 56 | 112,00,000.00 | 11 |
| 2017-18 | 79 | 158,00,000.00 | 5 |
| 2018-19 | - | - | - |

- ಕರ್ನಾಟಕ ಕ್ರೀಡಾ ಪ್ರಾಧಿಕಾರದಡಿಯಲ್ಲಿ ಕ್ರೀಡಾ ಸಂಘ ಸಂಸ್ಥೆಗಳಿಗೆ ಸಹಾಯಧನ ನೀಡಿರುವ ವಿವರ.

| ವರ್ಷ | ಮಾನ್ಯತೆ ಪಡದ ರಾಜ್ಯ ಕ್ರೀಡಾ ಸಂಸ್ಥೆಗಳು | | ಇತರೆ ಕ್ರೀಡಾ ಸಂಘ ಸಂಸ್ಥೆಗಳು | |
|---|---|---|---|---|
| | ಸಂಖ್ಯೆ | ಸಹಾಯಧನ | ಸಂಸ್ಥೆ | ಸಹಾಯಧನ |
| 2016-17 | 21 | 86,27,772.00 | 44 | 135,10,000.00 |
| 2017-18 | 24 | 605,70,269.00 | 69 | 124,50,000.00 |
| 2018-19 | 24 | 525,37,791.00 | 9 | 90,35,000.00 |